# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 260 | Pages. 2 | Date: 30-08-2025, SATURDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 260 – ಪುಟಗಳು : 2 30-08-2025 ಶನಿವಾರ | Ph: 8762954248 | ದರ : ₹1


# ಸೋಮನಹಳ್ಳಿ ನಾಗರಾಜ್‌ಗೆ ಒಲಿದ ಅದೃಷ್ಟ

## ಮೂರನೇ ಬಾರಿಗೆ ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ | ಅರಸೀಕೆರೆಯ ಶೇಖರಪ್ಪ ಉಪಾಧ್ಯಕ್ಷ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಹಾಲಿ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್ ಮರು ಆಯ್ಕೆಯಾದರು. ಅರಸೀಕೆರೆಯ ಶೇಖರಪ್ಪ ಇದೇ ಮೊದಲ ಬಾರಿಗೆ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಬ್ಯಾಂಕ್ ಸಭಾಂಗಣದಲ್ಲಿ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಗರಾಜ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶೇಖರಪ್ಪ ಇಬ್ಬರೇ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಕೆ, ಪರಿಶೀಲನೆ ಮತ್ತು ವಾಪಸ್ ಪಡೆಯುವ ಪ್ರಕ್ರಿಯೆ ಮುಗಿದ ನಂತರ ಎಲ್ಲವೂ ಕ್ರಮಬದ್ಧವಾಗಿದ್ದರಿಂದ ಮುಖ್ಯ ಚುನಾವಣಾಧಿಕಾರಿ ಮಾರುತಿ



ಅವರು ಅಧ್ಯಕ್ಷ-ಉಪಾಧ್ಯಕ್ಷರು ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು. ಈ ಮೂಲಕ ಸತತ 3ನೇ ಬಾರಿಗೆ ನಾಗರಾಜ್ ಅಧ್ಯಕ್ಷರಾಗಿ ವಿಶೇಷ ದಾಖಲೆ ಬರೆದಿದ್ದಾರೆ.

ಈ ವೇಳೆ ಮಾತನಾಡಿದ ನಾಗರಾಜ್, ತಮ್ಮ ಅವಿರೋಧ ಆಯ್ಕೆಗೆ ಸಹಕರಿಸಿದ ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಶಾಸಕರಾದ ಸಿ.ಎನ್. ಬಾಲಕೃಷ್ಣ, ಹೆಚ್.ಪಿ. ಸ್ವರೂಪ್, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರಿಗೆ ಧನ್ಯವಾದ ಹೇಳಿದರು.

ಎಲ್ಲ 13 ಸ್ಥಾನಗಳನ್ನು ಜೆಡಿಎಸ್ ಅಭ್ಯರ್ಥಿಗಳು ಗೆಲ್ಲಲು, ಬ್ಯಾಂಕ್ ಉತ್ತಮ ರೀತಿಯಲ್ಲಿ ಬೆಳೆಯಲು ರೇವಣ್ಣ ಅವರು ಕಾರಣ ಎಂದರು.

ಮೂರನೇ ಬಾರಿಗೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿರುವುದರಿಂದ ಜವಾಬ್ದಾರಿ ಇನ್ನೂ ಹೆಚ್ಚಿದೆ. ಇದು ಸುಖದ ಸುಪ್ಪತ್ತಿಗೆ ಅಲ್ಲ, ಮುಳ್ಳಿನ ಹಾಸಿಗೆ. ಹಿಂದೆ ನಬಾರ್ಡ್‌ನಿಂದ ಆರ್ಥಿಕ ನೆರವು, ಪುನರ್‌ಧನ ಶೇ.90 ರಷ್ಟು ಸಿಗುತ್ತಿತ್ತು. ಆದರೀಗ ಶೇ.10 ಕ್ಕೆ ಇಳಿದಿದೆ ಎಂದರು.

ನೂತನ ಉಪಾಧ್ಯಕ್ಷ ಶೇಖರಪ್ಪ ಮಾತನಾಡಿ, ಮೊದಲ ಬಾರಿಗೆ ನಿರ್ದೇಶಕನಾದ ನನಗೆ ಉಪಾಧ್ಯಕ್ಷ ಸ್ಥಾನ ಸಿಕ್ಕಿದ್ದು, ಇದಕ್ಕೆ ಕಾರಣರಾದ ರೇವಣ್ಣ ಅವರಾದಿಯಾಗಿ ಎಲ್ಲರಿಗೂ ಧನ್ಯವಾದ ಹೇಳಿ, ರೈತರಿಗೆ ಪ್ರಾಮಾಣಿಕ ಕೆಲಸ ಮಾಡಲು ಶ್ರಮಿಸುವೆ ಎಂದು ಭರವಸೆ ನೀಡಿದರು.

ಶಾಸಕರಾದ ಸಿ.ಎನ್. ಬಾಲಕೃಷ್ಣ, ಹೆಚ್.ಪಿ. ಸ್ವರೂಪ್, ಡಾ. ಸೂರಜ್ ರೇವಣ್ಣ ಮಾತನಾಡಿದರು.

ಜಿಲ್ಲಾ ಸಹಕಾರ ಇಲಾಖೆ ಉಪ ನಿಬಂಧಕ ಕಿರಣ್ ಕುಮಾರ್, ಹಾಸನ ಉಪ ವಿಭಾಗದ ಸಹಾಯಕ ನಿಬಂಧಕ ಬಾಲಚಂದ್ರ ಹಾಗೂ ಎಲ್ಲ ನಿರ್ದೇಶಕರು ಹಾಜರಿದ್ದರು. ಇದಕ್ಕೂ ಮುನ್ನ ಮುಖ್ಯ ಚುನಾವಣಾಧಿಕಾರಿ ಮಾರುತಿ ಅವರು ಗೆದ್ದಿರುವ ಎಲ್ಲ 13 ಮಂದಿ ನೂತನ ನಿರ್ದೇಶಕರಿಗೆ ಪ್ರಮಾಣ ಪತ್ರ ವಿತರಿಸಿ ಅಭಿನಂದಿಸಿದರು.

# ರಾಜ್ಯಮಟ್ಟದ ಕ್ರೀಡೆ-ನೃತ್ಯದಲ್ಲಿ ಹಾಸನದ ಸ್ಕಾಲರ್ಸ್ ಸ್ಕೂಲ್ ವಿದ್ಯಾರ್ಥಿಗಳ ಸಾಧನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನ ವಲಯ-8 ಮತ್ತು ರಾಜ್ಯಮಟ್ಟದ ಕ್ರೀಡಾಕೂಟ ಮತ್ತು ನೃತ್ಯ ಸ್ಪರ್ಧೆಯಲ್ಲಿ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಸ್ಕೂಲ್‌ನ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ ವಿಜೇತರಾಗಿ ಶಾಲೆಗೆ ಕೀರ್ತಿ ತಂದುಕೊಟ್ಟಿದ್ದಾರೆ.

ಈ ಸಾಧನೆಯನ್ನು ಗುರುತಿಸಿ, ಶಾಲೆಯ ಬೆಳಗಿನ ಪ್ರಾರ್ಥನಾ ಸಮಾರಂಭದಲ್ಲಿ ವಿಜೇತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಆಡಳಿತಾಧಿಕಾರಿ ಡಾ. ಎಚ್. ಎನ್. ಚಂದ್ರಶೇಖರ್ ಅವರು, ನಮ್ಮ ವಿದ್ಯಾರ್ಥಿಗಳು ಶ್ರಮ, ಶಿಸ್ತು ಮತ್ತು ಆತ್ಮವಿಶ್ವಾಸದಿಂದ ಶಾಲೆಯ ಹೆಸರನ್ನು ರಾಜ್ಯಮಟ್ಟದಲ್ಲಿ ಎತ್ತಿ ಹಿಡಿದಿದ್ದಾರೆ. ಇದು ಅವರ ವ್ಯಕ್ತಿತ್ವ ವಿಕಾಸದ ದಿಶೆಯಲ್ಲಿ ಒಂದು ಮಹತ್ವದ ಮೆಟ್ಟಿಲು ಎಂದು ಸಂತೋಷ ವ್ಯಕ್ತಪಡಿಸಿದರು.

ಶಾಲೆಯ ಆಡಳಿತ ಮಂಡಳಿ ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಅವರು, ಈ ಯಶಸ್ಸಿಗೆ ವಿದ್ಯಾರ್ಥಿಗಳ ಪರಿಶ್ರಮ, ಪೋಷಕರ ನಿರಂತರ ಬೆಂಬಲ ಮತ್ತು ಶಿಕ್ಷಕರ ಸರಿಯಾದ ಮಾರ್ಗದರ್ಶನವೇ ಮೂಲ ಕಾರಣ ಎಂದು ಶ್ಲಾಘಿಸಿದರು.

ಶಿಸ್ತು ಮತ್ತು ಒಂದು ತಂಡ ಎಂಬ ಭಾವನೆ ಬೆಳೆಯಿತು:



ಪ್ರಾಂಶುಪಾಲ ಆಂಟೋನಿ ಮಾತನಾಡಿ, ಇಂತಹ ಸ್ಪರ್ಧಾತ್ಮಕ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ಒಂದು ತಂಡ ಎಂಬ ಭಾವನೆ ಮತ್ತು ಉನ್ನತ ಧ್ಯೇಯಗಳನ್ನು ಬೆಳೆಸುವಲ್ಲಿ ನೆರವಾಗುತ್ತವೆ. ಈ ಸಾಧನೆ ಅದಕ್ಕೆ ಉತ್ತಮ ಉದಾಹರಣೆ ಎಂದು ಅಭಿಪ್ರಾಯಪಟ್ಟರು.

ದೈಹಿಕ ಶಿಕ್ಷಣ ಶಿಕ್ಷಕಿ ಸಹನಾ ಅವರು ವಿದ್ಯಾರ್ಥಿಗಳು ಕ್ರೀಡಾ ಮೈದಾನದಲ್ಲಿ ಮತ್ತು ನೃತ್ಯದ ಮಂಚದ ಮೇಲೆ ತೋರಿದ ತಾಳ್ಮೆ, ಸಹನೆ ಮತ್ತು ಆತ್ಮವಿಶ್ವಾಸವು ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಕ್ಷಕರು ಮತ್ತು ಪೋಷಕರು ವಿದ್ಯಾರ್ಥಿಗಳ ಸಾಧನೆಯನ್ನು ಅಭಿನಂದಿಸಿದ್ದಾರೆ. ಪ್ರತಿ ವಿದ್ಯಾರ್ಥಿಯ ಯಶಸ್ಸಿನ ಹಿಂದೆ ಅವರ ಸ್ವಂತ ಪರಿಶ್ರಮದ ಜೊತೆಗೆ ಶಿಕ್ಷಕರ ಪ್ರೋತ್ಸಾಹ ಮತ್ತು ಪೋಷಕರ ಅಚಲ ಬೆಂಬಲವೂ ಪ್ರಮುಖ ಪಾತ್ರ ವಹಿಸಿದೆ ಎಂದು ಅವರು ಹೇಳಿದರು.

# ಕ್ರೀಡಾ ಲೋಕದ ಸ್ಫೂರ್ತಿ ಮೇಜರ್ ಧ್ಯಾನ್ ಚಂದ್

ಹಾಸನ: ಕ್ರೀಡಾ ಲೋಕದ ಸ್ಫೂರ್ತಿ ಮೇಜರ್ ಧ್ಯಾನ್ ಚಂದ್ ಅವರ ಜೀವನ ಪ್ರತಿಯೊಬ್ಬ ಕ್ರೀಡಾಪಟುಗಳಿಗೆ ಆದರ್ಶಪ್ರಾಯ ಎಂದು ಟೈಮ್ಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಕೆ. ಗಂಗಾಧರ್ ಹೇಳಿದರು.

ನಗರದ ವಿಜಯನಗರ ಬಡಾವಣೆಯಲ್ಲಿರುವ ಟೈಮ್ಸ್ ಅಂತಾರಾಷ್ಟ್ರೀಯ ಶಾಲೆ ಆವರಣದಲ್ಲಿ ಶುಕ್ರವಾರ ಟೈಮ್ಸ್ ಸ್ಪೋರ್ಟ್ಸ್ ಅಕಾಡೆಮಿ ವತಿಯಿಂದ ಹಮ್ಮಿಕೊಂಡಿದ್ದ ಮೇಜರ್ ಧ್ಯಾನ್ ಚಂದ್ ಅವರ ಜನ್ಮ ದಿನಾಚರಣೆ ಸ್ಮರಣಾರ್ಥ ವಿಶ್ವ ಕ್ರೀಡಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಧ್ಯಾನ್ ಚಂದ್ ಅವರು ಒಲಿಂಪಿಕ್ಸ್‌ನಲ್ಲಿ ನಮ್ಮ ದೇಶಕ್ಕೆ ಮೂರು ಬಾರಿ ಚಿನ್ನದ ಪದಕವನ್ನು ತಂದುಕೊಟ್ಟ ಒಬ್ಬ ಶ್ರೇಷ್ಠ ಆಟಗಾರ. ಹಾಕಿ ಆಟದ ಮೇಲೆ ಅವರ ಹಿಡಿತ ಹೇಗಿತ್ತು ಎಂಬುದಕ್ಕೆ ಅವರ ಆಟವನ್ನು ವೀಕ್ಷಿಸಿದವರಿಗೆ ಅದರ ಬಗ್ಗೆ ಅರಿವಾಗುತ್ತದೆ. ಹಾಕಿ ಸ್ಟಿಕ್‌ನೊಂದಿಗೆ ಚೆಂಡು ಅಂಟಿಕೊಂಡಿರುತ್ತಿತ್ತೇನೊ ಎಂಬುವಷ್ಟು ಅವರ ಆಟ ಸೊಗಸಾಗಿರುತಿತ್ತು. ರಾತ್ರಿ ವೇಳೆ



ಚಂದ್ರನ ಬೆಳಕಿನಲ್ಲಿ ಆಟವನ್ನು ಆಡುತ್ತಿದ್ದ ಅವರನ್ನು ಅವರ ಗೆಳೆಯರು ಧ್ಯಾನ್ ಚಂದ್ ಎಂದು ಕರೆದರು. ಯಾವುದೇ ಒಬ್ಬ ಆಟಗಾರನಿಗೆ ತಾನು ಪ್ರತಿನಿಧಿಸುವ ಕ್ರೀಡೆಯ ಮೇಲೆ ಆಷ್ಟೊಂದು ಆಸಕ್ತಿ, ಶ್ರದ್ಧೆ, ಭಕ್ತಿಯೊಂದಿಗೆ ಹಾಕಿ ಕ್ರೀಡೆಯನ್ನು ಕಲಿತಿದ್ದರು. ಹಾಕಿ ಕ್ರೀಡೆಯಲ್ಲಿ ಅಷ್ಟೆಲ್ಲ ಸಾಧನೆ ಮಾಡಿದ್ದರು, ಅವರು ಕೊನೆಯ ದಿನಗಳಲ್ಲಿ ಬಡತನದಲ್ಲಿಯೇ ಮೃತರಾದರು. ಆದರೆ ಇಂದು ಆ ತರನಾದ ಪರಿಸ್ಥಿತಿ ಇಲ್ಲ, ಯಾವುದೇ ಒಬ್ಬ ಆಟಗಾರ ಒಂದು ಪಂದ್ಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರೆ ಬೆಳಿಗ್ಗೆ ಆಗುವಷ್ಟರಲ್ಲಿ ಸ್ಟಾರ್ ಆಗಿ ಹೊರಹೊಮ್ಮುತ್ತಾನೆ ಎಂದು ತಿಳಿಸಿದರು.

ಧ್ಯಾನ್ ಚಂದ್ ಅವರು ಭಾರತೀಯ ಸೇನೆಯಲ್ಲಿ ಕಾರ್ಯ ನಿರ್ವಹಣೆ ಮಾಡಿಕೊಂಡು ಹಾಕಿ ಕ್ರೀಡೆಯಲ್ಲಿ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಹಾಕಿ ಕ್ರೀಡೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡರು. ಅವರ ಹಾಕಿ ಕ್ರೀಡೆಯ ಮೇಲಿನ ಆಸಕ್ತಿ ಹಾಗೂ ಕ್ರೀಡಾ ಪ್ರತಿಭೆಯನ್ನು ಕಂಡು ಇವರನ್ನು 1926ರಲ್ಲಿ ಭಾರತೀಯ ಹಾಕಿ ತಂಡಕ್ಕೆ ಆಯ್ಕೆ ಮಾಡಲಾಯಿತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಇವರು ಸುಮಾರು 400ಕ್ಕೂ ಅಧಿಕ ಗೋಲುಗಳನ್ನು ಗಳಿಸುವ ಮೂಲಕ ಕ್ರೀಡೆಯಲ್ಲಿನ ಪರಿಶ್ರಮವನ್ನು ಪ್ರದರ್ಶಿಸಿದ್ದಾರೆ. ಹಾಕಿ ಕ್ರೀಡೆಯಲ್ಲಿನ ಇವರ ಸಾಧನೆಯನ್ನು ಮನಗಂಡು ಅನೇಕ ದೇಶಗಳು ಇವರನ್ನು ಗೌರವದಿಂದ ಕಂಡಿದ್ದು, ಲಂಡನ್‌ನ ಹಾಕಿ ಕ್ರೀಡಾಂಗಣಕ್ಕೆ ಧ್ಯಾನ್ ಚಂದ್ ಅವರ ಹೆಸರನ್ನು ಇರಿಸಲಾಗಿದೆ. ಅಲ್ಲದೇ ನಮ್ಮ ದೇಶದಲ್ಲಿ ಇವರ ಗೌರವಾರ್ಥ ಅಂಚೆ ಚೀಟಿ ಬಿಡುಗಡೆ ಮಾಡಿದೆ. ದೆಹಲಿಯಲ್ಲಿ ಇವರ ಹೆಸರಿನಲ್ಲಿ ರಾಷ್ಟ್ರೀಯ ಕ್ರೀಡಾಂಗಣ, ರಾಜೀವ್ ಗಾಂಧಿ ಖೇಲ್ ರತ್ನ, ಅರ್ಜುನ ಹಾಗೂ ದ್ರೋಣಚಾರ್ಯ ಪ್ರಶಸ್ತಿ ನೀಡಲಾಗಿದ್ದು, ರಾಜ್ಯ ಸರ್ಕಾರ ಏಕಲವ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ಧ್ಯಾನ್ ಚಂದ್ ಅವರು ಕ್ರೀಡಾ ಪ್ರೇಮ ಇಂದಿನ ಪ್ರತಿಯೊಬ್ಬ ಯುವ ಕ್ರೀಡಾಪಟುಗಳಿಗೆ ಸ್ಫೂರ್ತಿಯಾದರೆ ಸಾಧನೆ ಹಾದಿ ಸುಲಲಿತವಾಗಲಿದೆ. ಅವರ ಹೆಸರಿನಲ್ಲಿ ವಿಶ್ವ ಕ್ರೀಡಾ ದಿನಾಚರಣೆ ಮಾಡುತ್ತಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ ಎಂದರು.

ಟೈಮ್ಸ್ ಸ್ಪೋರ್ಟ್ಸ್ ಅಕಾಡೆಮಿ ಸಂಯೋಜಕ ರಮೇಶ್, ದೈಹಿಕ ಶಿಕ್ಷಣ ಶಿಕ್ಷಕ ದರ್ಶನ್, ಕ್ರಿಕೆಟ್ ತರಬೇತುದಾರ ವಿನಯ್, ಫುಟ್‌ಬಾಲ್ ತರಬೇತುದಾರ ತೇಜು ಹಾಗೂ ಇತರರು ಹಾಜರಿದ್ದರು.

# ಮೌಲ್ಯಯುತ ಶಿಕ್ಷಣದ ಅವಶ್ಯಕತೆ ಹೆಚ್ಚಿದೆ: ಗಂಗಾಧರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಿಕ್ಷಣ ಸಂಸ್ಥೆಗಳು ಹಾಗೂ ಸರ್ಕಾರ ಕೂಡ ಫಲಿತಾಂಶದ ಧಾವಂತದಲ್ಲಿವೆ. ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡುವ ಅನಿವಾರ್ಯತೆ ಇದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಪಿ. ಗಂಗಾಧರ್ ಹೇಳಿದರು.

ಹಾಸನ ಪದವಿ ಪೂರ್ವ ಕಾಲೇಜುಗಳ ಅರ್ಥಶಾಸ್ತ್ರ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವೇದಿಕೆಯಿಂದ ಎವಿಕೆ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶೈಕ್ಷಣಿಕ ಕಾರ್ಯಾಗಾರ, ಪ್ರತಿಭಾ ಪುರಸ್ಕಾರ ಮತ್ತು ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿದ್ಯೆ ಕೆಲಸ ಪಡೆಯಲು ಮಾತ್ರವಲ್ಲದೆ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗಬೇಕು. ಎಐ ತಂತ್ರಜ್ಞಾನದ ಕಾಲಘಟ್ಟದಲ್ಲಿ ಉದ್ಯೋಗಕ್ಕೆ ಮನುಷ್ಯರೇ ಬೇಡವಾದ ಸನ್ನಿವೇಶ ಇದೆ. ಇಂತಹ ಸಂದರ್ಭದಲ್ಲಿ ವಿದ್ಯೆ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗಬೇಕು.



ಆ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳಿಗೆ ಬೋಧನೆ ಮಾಡಬೇಕು ಎಂದರು.

ಫಲಿತಾಂಶ ಒಂದನ್ನೇ ಗುರಿಯಾಗಿಸಿಕೊಂಡು ಬೋಧನೆಮಾಡುವುದು ಸರಿಯಾದ ಕ್ರಮವಲ್ಲ. ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ಅನಿವಾರ್ಯವಾಗಿದೆ. ಉಪಯೋಗಕ್ಕೆ ಬಾರದ ಮೂರು-ಮೂರು ಡಿಗ್ರಿ ಪಡೆಯುವುದರಿಂದ ದೇಶ ಮುನ್ನಡೆಯುವುದಿಲ್ಲ. ಭಾರತಕ್ಕೆ ಸತ್ವಯುತ ಶಿಕ್ಷಣ ಪಡೆದ ಪ್ರಜೆಗಳು ಬೇಕಾಗಿದ್ದಾರೆ ಎಂದರು.

ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿರಬೇಕು. ಆಗ ಬೋಧಕರು ಕೂಡ ಉತ್ಸಾಹದಲ್ಲಿ ಕಲಿಸಲು ಸಹಕಾರಿಯಾಗುತ್ತದೆ. ಶೇ.100 ಫಲಿತಾಂಶದ ಧಾವಂತಕ್ಕೆ ಬಿದ್ದ ಶಾಲೆಗಳೇ ಮಕ್ಕಳನ್ನು ಹುಡುಕಿಕೊಂಡು ಹೋಗುತ್ತಿರುವ ಸನ್ನಿವೇಶ ಉಂಟಾಗಿದೆ. ವಿದ್ಯೆ ಕೆಲಸ ಪಡೆಯಲು ಅಲ್ಲ. ಕೆಲಸವನ್ನು ಯಶಸ್ವಿಗೊಳಿಸಲು, ಜೀವನದ ಮಾರ್ಗ ಸುಗಮಗೊಳಿಸಿಕೊಳ್ಳಲು ಅವಶ್ಯಕವಾಗಿದೆ ಎಂದರು.

ದೊಡ್ಡಮಟ್ಟದ ಬದಲಾವಣೆ ಆಗುವ ಕಾಲಘಟ್ಟದಲ್ಲಿ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ನೀಡಲು ವಿಫಲವಾಗುತ್ತಿದ್ದು, ಶಿಕ್ಷಕರು ಈ ನಿಟ್ಟಿನಲ್ಲಿ ಶ್ರಮವಹಿಸಬೇಕೆಂದರು.

ಸಕಲೇಶಪುರ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ವಿ.ಪಿ. ರಮೇಶ್ ಮಾತನಾಡಿದರು.

ದ್ವಿತೀಯ ಪಿಯುಸಿ ಅರ್ಥಶಾಸ್ತ್ರ ವಿಷಯದಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಜಿಲ್ಲಾ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಎಚ್.ಡಿ. ಸುರೇಶ್, ಪದವಿ ಪೂರ್ವ ಕಾಲೇಜುಗಳ ಅರ್ಥಶಾಸ್ತ್ರ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವೇದಿಕೆ ಅಧ್ಯಕ್ಷ ಪ್ರಕಾಶ್, ಎಂ.ಆರ್. ಸಹದೇವ, ಜಸ್ಟಿನಾ ಪ್ಯಾಟ್ರಿಕ್, ವೆಂಕಟೇಶ್, ವೈ.ಪಿ.ಕೀರ್ತಿಕುಮಾರ್, ಎಚ್.ಟಿ ಸುರೇಶ್, ಎಚ್.ಎಸ್. ಶಕುಂತಲ, ಎಂ.ಎಸ್. ಫರ್ಜಾನಾ ಅಂಜುಂ, ಕಂಬೇಗೌಡ, ಗಿಡ್ಡೇಗೌಡ, ಎಂ.ಆರ್.ಸಹದೇವ ಇತರರು ಇದ್ದರು.

# ವಿದ್ಯಾರ್ಥಿಗಳು ಕ್ರೀಡಾಸಕ್ತಿ ಬೆಳೆಸಿಕೊಳ್ಳಿ: ಸಿಮೆಂಟ್ ಮಂಜು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಕಟ್ಟಾಯ: ಶೈಕ್ಷಣಿಕ ಪ್ರಗತಿಯ ಜೊತೆಗೂ ವಿದ್ಯಾರ್ಥಿಗಳು ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕೆಂದು ಶಾಸಕ ಸಿಮೆಂಟ್ ಮಂಜು ಸಲಹೆ ನೀಡಿದರು.

ಕಟ್ಟಾಯ ಹೋಬಳಿಯ ಪ್ರೌಢಶಾಲಾ ಆವರಣದಲ್ಲಿ ಪಿ.ಎಂ. ಶ್ರೀ. ಹಾಗೂ ಹನುಮಂತಪುರ ಸರ್ಕಾರಿ ಪ್ರೌಢಶಾಲೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಹೋಬಳಿ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆ ಅತ್ಯಂತ ಮುಖ್ಯವಾಗಿದೆ. ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಲು ಕ್ರೀಡೆ ಅವಶ್ಯಕವಾಗಿದೆ. ಸೋಲು-ಗೆಲುವವನ್ನು ಸಮಚಿತ್ತದಿಂದ ಸ್ವೀಕರಿಸುವ ಭಾವನೆಯೂ ಕ್ರೀಡೆಯಿಂದ ದೊರೆಯುತ್ತದೆ. ಸತತ ಪ್ರಯತ್ನ ಮತ್ತು ಪರಿಶ್ರಮದ ಮೂಲಕ ಕ್ರೀಡಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿ ತಮ್ಮ ಗುರಿ ಸಾಧಿಸಬೇಕೆಂದು ಕಿವಿಮಾತು ಹೇಳಿದರು.

ಪ್ರತಿಯೊಬ್ಬರೂ ಶ್ರದ್ಧೆಯಿಂದ ಆಟಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಮುಂದಾಗಬೇಕಿದೆ. ಮೊಬೈಲ್, ಇಂಟರ್‌ನೆಟ್ ಅಬ್ಬರಕ್ಕೆ ಮಾರುಹೋಗಿರುವ ಇಂದಿನ ಯುವಜನತೆ ನಮ್ಮ ಮೂಲ ಕ್ರೀಡೆಗಳನ್ನು ಕಡೆಗಣಿಸುತ್ತಿದೆ. ಕೇವಲ ವಿಡಿಯೋ ಗೇಮ್‌ನಂತಹ ಇತರೇ ಅಂಶಗಳಿಂದಾಗಿ ಕ್ರೀಡಾ ಮನೋಭಾವ ಕಳೆಗುಂದುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಹೇಳಿದರು.

ವಕೀಲ ಚನ್ನಂಗಿಹಳ್ಳಿ ಶ್ರೀಕಾಂತ್, ಬಿಜೆಪಿ ಯುವ ಮುಖಂಡ ಅಮೃತ್, ಶಿಕ್ಷಕರಾದ ಸುಕುಮಾರ್, ಯೋಗೇಶ್, ಶಾಂತರಾವ್, ಚೂಡಾಮಣಿ ಹಾಗೂ ಇತರರಿದ್ದರು.

# ಸೆ. 1ರಂದು ಬಿಜೆಪಿಯಿಂದ ಧರ್ಮಸ್ಥಳ ಚಲೋ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ ಖಂಡಿಸಿ ಸೆ.1 ರಂದು ಬಿಜೆಪಿಯಿಂದ ಧರ್ಮಸ್ಥಳ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಪ್ರೀತಂ ಜೆ. ಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಯಾತ್ರೆ ಆಯೋಜಿಸಲಾಗಿದೆ. ಸಮಾರಂಭದಲ್ಲಿ 10 ಸಾವಿರ ಜನರು ಭಾಗವಹಿಸಲಿದ್ದಾರೆ ಎಂದರು.

ಶ್ರೀ ಮಂಜುನಾಥನ ಭಕ್ತರು, ಕ್ಷೇತ್ರದ ಹಿತೈಷಿಗಳು ಭಾಗಿಯಾಗಿ ಪಿತೂರಿ ಮಾಡುವವರಿಗೆ ಉತ್ತರ ಕೊಡಬೇಕು. ಸನಾತನ ಹಿಂದು ಧರ್ಮದ ವಿರುದ್ಧ ಷಡ್ಯಂತ್ರ ವ್ಯವಸ್ಥಿತವಾಗಿ ನಡೆಯುತ್ತಿದೆ. ಅದಕ್ಕಾಗಿ ಕೆಲವರು ಒಂದು ತಂಡವಾಗಿ



ಕೆಲಸ ಮಾಡುತ್ತಿದ್ದಾರೆ. ಇದು ರಾಜ್ಯ-ದೇಶದ ಗಮನ ಸೆಳೆದಿದೆ. ಕಪಟಿಗಳ ನಿಜ ಬಣ್ಣ ಬಯಲಾಗಬೇಕು ಎಂದು ಒತ್ತಾಯಿಸಿದರು.

ಧರ್ಮಸ್ಥಳ ವಿಚಾರದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿಲ್ಲ. ಹಿಂದು ಧರ್ಮ ಉಳಿಸಲು ಬಿಜೆಪಿ ಸದಾ ಮುಂದೆ ಇರಲಿದೆ. ಎಲ್ಲಾ ಸಮಾಜಗಳ ಹಿಂದು ಬಾಂಧವರು ಹೋರಾಟಕ್ಕೆ ಕೈ ಜೋಡಿಸಬೇಕು. ಧರ್ಮಸ್ಥಳದಲ್ಲಿ ನೂರಾರು ಶವಗಳ ಹೂತು ಹಾಕಲಾಗಿದೆ ಎಂಬ ಸುಳ್ಳು ಆರೋಪ ನಂಬಿ ಎಸ್‌ಐಟಿ ರಚನೆ ಮಾಡಿದ್ದರಿಂದ ಮಂಜುನಾಥನ ಭಕ್ತರಿಗೆ ಆಘಾತವಾಗಿದೆ. ತನಿಖೆ ದಿಕ್ಕು ತಪ್ಪಬಾರದು, ಸತ್ಯ ಹೊರ ಬರಲಿ, ಆದರೆ ಹಿಂದು ಭಾವನೆಗೆ ಧಕ್ಕೆ, ಧರ್ಮಸ್ಥಳಕ್ಕೆ ಕೆಟ್ಟ ಹೆಸರು ಪ್ರಯತ್ನ ಮಾಡುತ್ತಿರುವುದರ ವಿರುದ್ಧ ನಮ್ಮ ಹೋರಾಟ ನಿರಂತರವಾಗಿರಲಿದೆ ಎಂದರು.

ನಮ್ಮ ಹೋರಾಟ ಷಡ್ಯಂತ್ರದ ವಿರುದ್ಧ, ಕಾಣದ ಕೈಗಳು ಹಿಂದು ಅಸ್ಮಿತೆ ಬಗ್ಗೆ ತಕರಾರು ತೆಗೆದಿರುವಾಗ ನಾವು ಸುಮ್ಮನಿರಲು ಆಗುವುದಿಲ್ಲ. ವೈಚಾರಿಕ ಸಂಘರ್ಷದ ವಿರುದ್ಧ ದನಿ ಎತ್ತಲು ನಿರ್ಧರಿಸಿದ್ದೇವೆ.

ಪಿತೂರಿ ಮಾಡಿರುವ ಯೂಟ್ಯೂಬರ್, ಮುಸುಕುಧಾರಿಯ ಮುಖವಾಡ ಕಳಚಬೇಕು. ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಬೇಕೆಂಬುದು ಬಿಜೆಪಿ ಆಗ್ರಹವಾಗಿದೆ ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ, ಗಿರೀಶ್ ಇದ್ದರು.

## ಸಂಪ್ರದಾಯ ಒಪ್ಪಿ ಉದ್ಘಾಟಿಸಲಿ

ಸಾಹಿತಿ ಬಾನು ಮುಷ್ತಾಕ್ ಅವರು ಹಿಂದು ಸಂಪ್ರದಾಯದಂತೆ ತಾಯಿ ಚಾಮುಂಡೇಶ್ವರಿಯನ್ನು ಒಪ್ಪಿ ಶ್ರದ್ಧೆಯಿಂದ ದಸರಾ ಉದ್ಘಾಟನೆ ಮಾಡಿಕೊಡುವುದಾದರೆ ಅದಕ್ಕೆ ವಿರೋಧ ವ್ಯಕ್ತಪಡಿಸಲು ನಾನ್ಯಾರು ಎಂದು ಮಾಜಿ ಶಾಸಕ ಪ್ರೀತಂ ಜೆ. ಗೌಡ ಪ್ರತಿಕ್ರಿಯಿಸಿದರು.


ಹಿಂದುಗಳ ನಂಬಿಕೆ ಮೇಲೆ ವಿಶ್ವಾಸ, ಗೌರವ, ಪ್ರೀತಿಯಿಟ್ಟು ಉದ್ಘಾಟನೆ ಮಾಡಿಕೊಡುವುದಾದರೆ ಮಾಡಲಿ. ಮುಂದಿನ ದಿನಗಳಲ್ಲಿ ಬೇರೆ ಧರ್ಮಗಳಲ್ಲೂ ಎಲ್ಲಾ ಮಹಿಳೆಯರಿಗೂ ಈ ರೀತಿಯ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಬಾನು ಮುಷ್ತಾಕ್ ಅವರ ಆಯ್ಕೆಯನ್ನು ಯಾರೋ ವಿರೋಧಿಸುತ್ತಾರೆಂದ ಮಾತ್ರಕ್ಕೆ ನಾನು ಅವರ ವಕ್ತಾರನಾಗಲು ಇಷ್ಟಪಡುವುದಿಲ್ಲ ಎಂದರು.

# ರಸ್ತೆಗೆ ಅಡ್ಡಲಾಗಿ ನಿಂತ ಒಂಟಿ ಸಲಗ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ದೈತ್ಯಾಕಾರದ ಒಂಟಿ ಸಲಗ ರಸ್ತೆಗೆ ಅಡ್ಡಲಾಗಿ ನಿಂತು ವಾಹನ ಸಂಚಾರಕ್ಕೆ ಅಡಚಣೆ ಉಂಟು ಮಾಡಿದ ಘಟನೆ ತಾಲ್ಲೂಕಿನ ಹಳ್ಳಿಬೈಲು ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ಬೈನೆ ಮರವನ್ನು ನೆಲಕ್ಕುರುಳಿಸಿ ತಿಂದು ನಿಂತಿದ್ದ ಕಾಡಾನೆ, ವಾಹನಗಳ ಓಡಾಟಕ್ಕೆ ತೊಂದರೆ ಮಾಡಿತು. ಅದರಿಂದ ಹಲವಾರು ವಾಹನಗಳು ರಸ್ತೆಯಲ್ಲೇ ನಿಂತುಕೊಳ್ಳಬೇಕಾಯಿತು. ಮಳೆ ಸುರಿಯುತ್ತಿದ್ದ ಕಾರಣ ವಾಹನ ಸವಾರರು ತೊಂದರೆ ಅನುಭವಿಸಿದರು.



ಚಾಲಕರು ಘಟನೆಯ ವಿಡಿಯೋ ಮಾಡಿ ಅರಣ್ಯ ಇಲಾಖೆ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಬರುವಂತೆ ಒತ್ತಾಯಿಸಿದರು. ನಂತರ ಸ್ಥಳಕ್ಕೆ ಬಂದ ಇಟಿಎಫ್ ಸಿಬ್ಬಂದಿ ಪಟಾಕಿ ಸಿಡಿಸಿ ಕಾಡಾನೆಯನ್ನು ಹಿಂದಕ್ಕೆ ಓಡಿಸಿದರು. ಪಟಾಕಿ ಶಬ್ದಕ್ಕೆ ಹೆದರಿದ ಒಂಟಿ ಸಲಗ ಕಾಡು ಪ್ರವೇಶಿಸಿತು.

# ಜೆಡಿಎಸ್‌ನಿಂದ ಧರ್ಮಸ್ಥಳಕ್ಕೆ ಸತ್ಯ ಯಾತ್ರೆ ನಾಳೆ

ಹಾಸನ: ಜೆಡಿಎಸ್‌ನಿಂದ ಆ. 31ರ ಭಾನುವಾರ ಧರ್ಮಸ್ಥಳದ ಕ್ಷೇತ್ರದ ವಿರುದ್ಧ ನಡೆಯುತ್ತಿರುವ ಅಪಪ್ರಚಾರ ಖಂಡಿಸಿ ಸತ್ಯಯಾತ್ರೆ ಏರ್ಪಡಿಸಲಾಗಿದೆ ಎಂದು ಶಾಸಕರಾದ ಸಿ.ಎನ್. ಬಾಲಕೃಷ್ಣ ಹಾಗೂ ಹೆಚ್.ಪಿ. ಸ್ವರೂಪ್ ತಿಳಿಸಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿ, ಅಂದು ಬೆಳಗ್ಗೆ 7.30ಕ್ಕೆ ರಾಜ್ಯದ ವಿವಿಧೆಡೆಗಳಿಂದ ಸಹಸ್ರಾರು ಸಂಖ್ಯೆಯ ಕಾರ್ಯಕರ್ತರು, ಮುಖಂಡರು ಹಾಗು ಧರ್ಮಸ್ಥಳದ ಭಕ್ತರು ಆಗಮಿಸಲಿದ್ದು ಎಲ್ಲರಿಗೂ ಕಂದಲಿಯ ಯಗಚಿ ಶಾಲಾ ಆವರಣದಲ್ಲಿ ಉಪಾಹಾರದ ವ್ಯವಸ್ಥೆ ಮಾಡಲಾಗಿದೆ.

ಪಕ್ಷದ ವರಿಷ್ಠರಾದ ಹೆಚ್.ಡಿ. ದೇವೇಗೌಡ, ಹೆಚ್.ಡಿ. ಕುಮಾರಸ್ವಾಮಿ, ಹೆಚ್.ಡಿ. ರೇವಣ್ಣ ಅವರ ಮಾರ್ಗದರ್ಶನ ಮತ್ತು ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಯಾತ್ರೆ ನಡೆಯಲಿದೆ. ಸುಮಾರು 10 ಸಾವಿರ ಜನರು ಹಾಸನದಿಂದ ಧರ್ಮಸ್ಥಳಕ್ಕೆ ತೆರಳಿ ಡಾ. ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾಗುತ್ತೇವೆಂದರು.

# ಐಸಿಎಆರ್ ಪ್ರಾಥಮಿಕ ಸಭೆಯಲ್ಲಿ ಸಂಸದ ಭಾಗಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾಸರಗೋಡಿನ ಕೇಂದ್ರೀಯ ತೋಟ ಬೆಳೆಗಳ ಸಂಶೋಧನಾ ಸಂಸ್ಥೆ (ಐಸಿಎಆರ್) ವತಿಯಿಂದ ಬೆಂಗಳೂರಿನ ಕುಮಾರಕೃಪಾ ಅತಿಥಿ ಗೃಹದಲ್ಲಿ ಶುಕ್ರವಾರ ನಡೆದ ತೆಂಗು ಬೆಳೆಗೆ ಕೀಟ ಮತ್ತು ರೋಗ ನಿರ್ವಹಣೆ ಕುರಿತ ಪ್ರಾಥಮಿಕ ಸಭೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಅವರು ಭಾಗಿಯಾಗಿದರು.

ಹಾಸನ ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ, ಕಡೂರು ಭಾಗಳಲ್ಲಿ ಹೆಚ್ಚಾಗಿ ತೆಂಗು ಬೆಳೆಯಲಾಗುತ್ತಿದೆ. ಅದನ್ನೇ ಜೀವನಾಧಾರವಾಗಿಸಿಕೊಂಡಿರುವ



ರೈತರು, ರೋಗಗಳ ಹೊಡೆತದಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರ ಬದುಕು ಸುಧಾರಿಸಬೇಕು. ಪ್ರಮುಖ ವಾಣಿಜ್ಯ ಬೆಳೆ ತೆಂಗಿನ ಬೆಳೆ ಉಳಿವಿಗೆ ಸರ್ಕಾರ ಹಾಗೂ ಸಂಶೋಧನಾ ಸಂಸ್ಥೆಗಳ ಸಹಕಾರ ಅಗತ್ಯವಿದೆ ಎಂದು ಶ್ರೇಯಸ್ ಪಟೇಲ್ ಸಭೆಯ ಗಮನಕ್ಕೆ ತಂದರು.

ತೆಂಗಿನ ತೋಟಗಳಿಗೆ ಕೀಟ ಮತ್ತು ರೋಗಗಳಿಂದ ಉಂಟಾಗುತ್ತಿರುವ ಹಾನಿ, ರೈತರ ಆರ್ಥಿಕ ಹಿತಾಸಕ್ತಿ ಹಾಗು ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಸಮಗ್ರ ಕ್ರಮಗಳ ಬಗ್ಗೆ ಚರ್ಚೆ ನಡೆಯಿತು.

ಕೇಂದ್ರ ಸಚಿವ ವಿ.ಸೋಮಣ್ಣ, ಸಂಸದ ಡಾ. ಸಿ.ಎನ್. ಮಂಜುನಾಥ, ಐಸಿಎಆರ್ ನಿರ್ದೇಶಕ ಡಾ.ಕೆ. ಬಾಲಚಂದ್ರ ಹೆಬ್ಬಾರ್ ಸೇರಿ ಅಧಿಕಾರಿಗಳು ಹಾಜರಿದ್ದರು.

# ಪಿಡಿಒ-ಇಒ ಅಮಾನತಿಗೆ ಎನ್.ಆರ್. ಸಂತೋಷ್ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**




ಹಾಸನ: ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ ವಸತಿ ಯೋಜನೆ ಹಂಚಿಕೆಯಲ್ಲಿ ಭಾರಿ ಅಕ್ರಮವಾಗಿದ್ದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯನ್ನು ಕೂಡಲೇ ಅಮಾನತುಗೊಳಿಸಬೇಕು ಎಂದು ಜೆಡಿಎಸ್ ಮುಖಂಡ ಎನ್. ಆರ್. ಸಂತೋಷ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ, ವಸತಿ ಯೋಜನೆಯಡಿ 90 ಮಂದಿ ಫಲಾನುಭವಿಗಳಿಗೆ ಹಣ ಬಿಡುಗಡೆಯಲ್ಲಿ ಬೋಗಸ್ ನಡೆಸಿರುವ ಅಧಿಕಾರಿಗಳನ್ನು ಗೃಹಮಂಡಳಿ ಅಧ್ಯಕ್ಷ ಕೆ.ಎ.ಶಿವಲಿಂಗೇಗೌಡ ಅವರು ನಿಯೋಜನೆ ಮಾಡಿದ್ದಾರೆ. ಹೀಗಾಗಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಅರಸೀಕೆರೆ ವಿಧಾನಸಭಾ ಕ್ಷೇತ್ರದ ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ ಪಿಎಂಎವೈ ಯೋಜನೆಯಡಿ ಮನೆ ಹಂಚಿಕೆಯಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆದಿದೆ ಎಂಬುದನ್ನು ಸ್ವತಃ ಶಾಸಕರೇ ಒಪ್ಪಿಕೊಂಡಿದ್ದಾರೆ.

ರಾಜ್ಯದಲ್ಲಿ ಅವರದೇ ಸರ್ಕಾರ ಇದ್ದು, ಶೀಘ್ರ ತನಿಖೆ ನಡೆಸಿ ತಪ್ಪಿತಸ್ಥರ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು. ಪಿಡಿಒ ಎನ್.ಕುಮಾರಸ್ವಾಮಿ ಎಂಬುವರು ಹಬ್ಬನಘಟ್ಟ ಪಂಚಾಯಿತಿಯಲ್ಲಿದ್ದಾಗ ಕರ್ತವ್ಯಲೋಪ ಆರೋಪದಡಿ ಅಮಾನತುಗೊಂಡಿದ್ದರು. ನಂತರ ಅವರನ್ನೇ ಇದೇ ಶಿವಲಿಂಗೇಗೌಡ ಅವರು ತಾವೇ ಮೌಖಿಕ ಶಿಫಾರಸ್ಸು ಮಾಡಿ ಬಾಣಾವರ ಗ್ರಾಮ ಪಂಚಾಯಿತಿ ಪಿಡಿಒ ಮಾಡಿದ್ದರು. ಇಷ್ಟೆಲ್ಲ ಭ್ರಷ್ಟಾಚಾರಕ್ಕೆ ಕುಮಾರಸ್ವಾಮಿಯೇ ಕಾರಣವಾಗಿದ್ದು, ಇವರ ನೇಮಕಕ್ಕೆ ಶಾಸಕ ಶಿವಲಿಂಗೇಗೌಡ ಅವರ ಮೌಖಿಕ ಆದೇಶ ಕಾರಣ ಎಂದು ಹಿಂದೆ ತಾಲ್ಲೂಕು ಪಂಚಾಯಿತಿ ಇಒ ಆಗಿದ್ದ ನಾಗರಾಜ್ ಎಂಬುವರು ಸರ್ಕಾರಕ್ಕೆ ನೀಡಿರುವ ವರದಿಯಲ್ಲಿ ವಿವರಿಸಿದ್ದಾರೆ ಎಂದು ದೂರಿದರು.

ಭ್ರಷ್ಟಾಚಾರಕ್ಕೆ ಕಾರಣರಾಗಿರುವ ಬಾಣಾವರ ಪಿಡಿಒ ಹಾಗೂ ತಾ.ಪಂ. ಇಒಗಳನ್ನು ಕೂಡಲೇ ಅಮಾನತು ಮಾಡಬೇಕೆಂದು ಒತ್ತಾಯಿಸಿ ಮುಂದಿನ ವಾರದಿಂದ ಅರಸೀಕೆರೆ ತಾಲ್ಲೂಕು ಪಂಚಾಯಿತಿ ಎದುರು ಧರಣಿ ನಡೆಸಲಾಗುವುದು. ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಅರಸೀಕೆರೆಯಿಂದ ಹಾಸನದ ವರೆಗೆ ಪಾದಯಾತ್ರೆ ನಡೆಸಿ, ಜಿಲ್ಲಾ ಪಂಚಾಯಿತಿ ಎದುರೂ ಧರಣಿ ನಡೆಸಲಾಗುವುದು. ಭ್ರಷ್ಟಾಚಾರಕ್ಕೆ ಕಡಿವಾಣ, ಅಧಿಕಾರಿಗಳಿಗೆ ಶಿಕ್ಷೆ ಆಗೋವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು.

ಯಾವ ಅಧಿಕಾರಿಗಳು ತಮ್ಮ ಮಾತು ಕೇಳುತ್ತಾರೋ, ಶಾಸಕರು ಹೇಳಿದಂತೆ ಸಹಿ ಹಾಕುತ್ತಾರೋ ಅಂಥವರನ್ನು ವಿವಿಧ ಗ್ರಾಮ ಪಂಚಾಯಿತಿಗಳಿಗೆ ಪ್ರಭಾರಿಯಾಗಿ ನೇಮಕ ಮಾಡಿಸುತ್ತಿದ್ದಾರೆ. ಇವರದೇ ಸರ್ಕಾರ ಇದ್ದು, ಪಿಡಿಒಗಳ ನೇಮಕ ಏಕೆ ಆಗುತ್ತಿಲ್ಲ ಎಂದು ಪ್ರಶ್ನಿಸಿದ ಅವರು, ತಾಲ್ಲೂಕಿಗೆ ಯಾವುದೇ ಅಧಿಕಾರಿ ಬರಬೇಕಿದ್ದರೂ, ಶಿವಲಿಂಗೇಗೌಡ ಅವರ ಗಮನಕ್ಕೆ ಬರಲೇಬೇಕು. ಅದೇ ಅಧಿಕಾರಿಗಳ ತಪ್ಪಿಗೆ ಶಿವಲಿಂಗೇಗೌಡರೂ ಹೊಣೆಗಾರರು, ಭ್ರಷ್ಟಾಚಾರದಲ್ಲಿ ನನ್ನ ಪಾತ್ರ ಇಲ್ಲ ಎಂದು ಶಾಸಕರು ಹೇಳಿದರೂ, ನನ್ನ ಬಳಿ ಸಾಕ್ಷಿಗಳಿವೆ. ನರೇಗಾ ಅಡಿ 5 ಕೋಟಿ ಬಿಲ್ ಪಾವತಿ ಯಾರ ಹೆಸರಿಗೆ ಆಗಿದೆ ಎಂಬುದನ್ನು ಬಹಿರಂಗ ಪಡಿಸಲಿ ಎಂದು ಸವಾಲು ಹಾಕಿದರು.

ತಪ್ಪು ಮಾಡಿರುವ ಅಧಿಕಾರಿಗೆ ಶಿಕ್ಷೆಯಾಗಲಿ ಎನ್ನುವ ಶಾಸಕರು, ಈವರೆಗೂ ಏಕೆ ಕ್ರಮ ಕೈಗೊಂಡಿಲ್ಲ. ಅರಸೀಕೆರೆಯಲ್ಲಿ ಪ್ರಾಮಾಣಿಕ ಅಧಿಕಾರಿಗಳಿಗೆ ಜಾಗವಿಲ್ಲ, ಶಾಸಕರ ತಾಳಕ್ಕೆ ಕುಣಿಯುವವರಿಗೆ ಮಣೆ ಹಾಕಲಾಗುತ್ತಿದೆ. ಕ್ಷೇತ್ರದಲ್ಲಿ ಏನೆಲ್ಲ ಭ್ರಷ್ಟಾಚಾರ ನಡೆದಿದೆ, ಎಲ್ಲೆಲ್ಲಿ ಬಡವರಿಗೆ ಅನ್ಯಾಯ ಆಗಿದೆ ಎಂಬುದನ್ನು ಹಂತ ಹಂತವಾಗಿ ಬಯಲು ಮಾಡುವುದರ ಜೊತೆಗೆ ತಪ್ಪಿತಸ್ಥರಿಗೆ ಶಿಕ್ಷೆಯಾಗುವವರೆಗೂ ಹೋರಾಟ ಮಾಡುವುದಾಗಿ ತಿಳಿಸಿದರು.

ಮುಖಂಡರಾದ ನಾಗರಾಜ್, ಭೋಜನಾಯಕ, ಅಜ್ಜಪ್ಪ, ಉಮೇಶ್, ಜಯರಾಂ ಇದ್ದರು.

# ಕುರುಹಿನಶೆಟ್ಟಿ ಸಹಕಾರ ಸಂಘದ ಸಭೆ ನಾಳೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**




ಹಾಸನ: ನಗರದ ನೇಕಾರ ಕುರುಹಿನಶೆಟ್ಟಿ ಪತ್ತಿನ ಸಹಕಾರ ಸಂಘದ 12ನೇ ಸರ್ವ ಸದಸ್ಯರ ಮಹಾಸಭೆ ಆ.31ರ ಬೆಳಿಗ್ಗೆ 11.30ಕ್ಕೆ ರವೀಂದ್ರ ನಗರದ ಕುರುಹಿನಶೆಟ್ಟಿ ಭವನದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಕೆ.ಸಿ. ಕೃಷ್ಣಶೆಟ್ಟಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರತಿವರ್ಷ ಸದಸ್ಯರಿಗೆ ಶೇ.10 ರಷ್ಟು ಲಾಭಾಂಶ ವಿತರಣೆ ಮಾಡಲಾಗುತ್ತಿದೆ. ಪ್ರಸ್ತುತ ಸಂಘದಲ್ಲಿ 401 ಸದಸ್ಯರಿದ್ದು, ಸಂಘವು 9 ಲಕ್ಷ ರೂ. ಷೇರುಧನ ಸಂಗ್ರಹಿಸಿದೆ ಎಂದರು.

2024-25ನೇ ಸಾಲಿನಲ್ಲಿ 45.49 ಲಕ್ಷ ರೂ. ಹೂಡಿಕೆ ಮಾಡಿ, 80 ಲಕ್ಷ ರೂ. ಸಾಲ ನೀಡಲಾಗಿದೆ. 2.18 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿರುವ ಸಂಘವು 4.05 ಲಕ್ಷ ರೂ. ಆದಾಯ ಗಳಿಸಿದೆ. ಪಿಗ್ಮಿ ಏಜೆಂಟ್ ಮೂಲಕ ಪ್ರತಿದಿನ 50 ಸಾವಿರ ಸಂಗ್ರಹಣೆ ನಡೆಯುತ್ತಿದೆ. ಮಹಾಸಭೆಯಲ್ಲಿ 2024-25ನೇ ಸಾಲಿನಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ಇದೇ ವೇಳೆ ಕುರುಹಿನಶೆಟ್ಟಿ ಕೇಂದ್ರ ಸಂಘದ ಚುನಾವಣೆಯಲ್ಲಿ ಗೆದ್ದಿರುವ ಜಿ.ಸೋಮಶೇಖರ್, ಡಿ.ಸಿ.ವೀರೇಂದ್ರ, ಕೃಷ್ಣಶೆಟ್ಟಿ ಸೇರಿದಂತೆ 11 ಮಂದಿಯನ್ನು ಸನ್ಮಾನಿಸಲಾಗುವುದು. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 35 ಸ್ಥಾನಗಳಲ್ಲಿ ಬಿ.ಲಿಂಗೇಶ್ವರ ಮತ್ತು ಜಿ.ಸೋಮಶೇಖರ್ ನೇತೃತ್ವದ ತಂಡ 28 ಸ್ಥಾನಗಳಲ್ಲಿ ಭರ್ಜರಿ ಜಯ ಗಳಿಸಿದೆ. ಮೈಸೂರು ಮೀಸಲು ವಿಭಾಗದಿಂದ 12 ಜನ ಗೆದ್ದಿದ್ದಾರೆ ಎಂದರು. ಅವರಲ್ಲಿ ನಗರದ ಕೆ.ಸಿ. ಕೃಷ್ಣಶೆಟ್ಟಿ, ಸಿ.ಎನ್. ವಾಸು, ಪ್ರೇಮಮ್ಮ, ಪುಟ್ಟಸ್ವಾಮಿಶೆಟ್ಟಿ, ಜಿ. ದೊರೆಸ್ವಾಮಿ, ಡಿ.ಸಿ.ವಿರೇಂದ್ರ ಆಯ್ಕೆಯಾಗಿದ್ದಾರೆ ಎಂದರು.

ಸಂಘದ ನಿರ್ದೇಶಕರಾದ ನಟರಾಜು, ಪ್ರೇಮಮ್ಮ, ತಿಮ್ಮರಾಯಶೆಟ್ಟಿ, ರತ್ನಮ್ಮ ವೆಂಕಟೇಶ್, ಚಂದ್ರಶೇಖರ್, ನಾರಾಯಣ ಶೆಟ್ಟಿ, ಬಾಲಕೃಷ್ಣ ಇದ್ದರು.

# ಮೋಕಲಿ ಪ್ರೌಢ ಶಾಲೆಯಲ್ಲಿ ಪರಿಸರ ಮಾಹಿತಿ ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಅರಕಲಗೂಡು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲ್ಲೂಕಿನ ಮೋಕಳಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಪರಿಸರ ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಧರ್ಮಸ್ಥಳ ಸಂಸ್ಥೆ ಕೃಷಿ ಮೇಲ್ವಿಚಾರಕ ಸುನಿಲ್‌ಕುಮಾರ್ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ವಿವಿಧ ವಿಭಾಗಗಳ ಕಾರ್ಯನಿರ್ವಹಿಸುತ್ತಿದೆ. ಜನಸಾಮಾನ್ಯರು ಹೆಚ್ಚಿನ ಪ್ರಯೋಜನ ಪಡೆಯುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪರಿಸರ ಅಸಮತೋಲನದಿಂದ ಪ್ರಕೃತಿ ವಿಕೋಪ ಅನುಭವಿಸುತ್ತಿದ್ದೇವೆ.

ಅದರ ನಿಯಂತ್ರಣ ಪರಿಸರ ಸಂರಕ್ಷಣೆಯಿಂದ ಸಾಧ್ಯವಾಗುತ್ತದೆ. ನಮ್ಮೆಲ್ಲರ ಹೊಣೆಯೆಂದು ಭಾವಿಸಿ ನಮ್ಮ ಸುತ್ತಲಿನ ವಾತಾವರಣ ಮಲಗಿನಗೊಳಿಸದೆ ಸ್ವಚ್ಛತೆಯಾಗಿಟ್ಟುಕೊಳ್ಳಬೇಕಿದೆ. ಪ್ರಮುಖವಾಗಿ ಶಿಕ್ಷಣ ಕಲಿಯುವ ಶಾಲಾ ವಾತಾವರಣ ಮತ್ತು ವಸತಿ ಪ್ರದೇಶದಲ್ಲಿ ಪರಿಸರ ಉಳಿಸುವ ನಿಟ್ಟಿನಲ್ಲಿ ಮುಂದಾಗೋಣ ಎಂದು ಹೇಳಿದರು.


ಮುಖ್ಯ ಶಿಕ್ಷಕ ಕೊಟ್ಟೂರಯ್ಯ ಮಾತನಾಡಿ, ಗ್ರಾಮ ಅಭಿವೃದ್ಧಿ ಯೋಜನೆಯು ಉತ್ತಮವಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು ವಿವಿಧ ತರಬೇತಿಗಳನ್ನು ನೀಡುತ್ತಿದ್ದು ಮಕ್ಕಳಲ್ಲಿ ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸಲು ಈ ಕಾರ್ಯಕ್ರಮವನ್ನು ಆಯೋಜಿಸಿದ್ದು ಕಾರ್ಯಕ್ರಮದ ಮಹತ್ವ ತಿಳಿದು ಕೊಂಡು ಶಾಲೆಯ ಆವರಣದಲ್ಲಿ ಗಿಡ ನಾಟಿ ಮಾಡಿ ಅದನ್ನು ಪೋಷಣೆ ಮಾಡಿ ಪರಿಸರವನ್ನು ಬೆಳೆಸಿ ನಾಡನ್ನು ಉಳಿಸಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶಾಲೆಯ ಆವರಣದಲ್ಲಿ ಗಿಡಗಳನ್ನು ನೆಟ್ಟು ನೀರನ್ನು ಹಾಕಲಾಯಿತು. ಅಲ್ಲದೆ ನೆಟ್ಟ ಗಿಡಗಳ ಪೋಷಣೆಯನ್ನು ವಿದ್ಯಾರ್ಥಿಗಳ ತಂಡ ರಚಿಸಿ ನೀಡಲಾಯಿತು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕುಮಾರ್, ದೈಹಿಕ ಶಿಕ್ಷಕ ಪುರುಷೋತ್ತಮ, ಸಹ ಶಿಕ್ಷಕಿ ಗೌತಮಿ, ಕಾರ್ಯಕ್ಷೇತ್ರದ ಸೇವಾ ಪ್ರತಿನಿಧಿ ಬೇಬಿ ಇತರರು ಉಪಸ್ಥಿತರಿದ್ದರು.

# ಶ್ರವಣಬೆಳಗೊಳ: ಮುನಿಗಳ ಕಠಿಣ ವ್ರತ, ತ್ಯಾಗಮಯ ಜೀವನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಶ್ರವಣಬೆಳಗೊಳ: ಸಲ್ಲೇಖನ ಸಮಾಧಿ ಮತ್ತು ತಪಸ್ಸಿನ ಪವಿತ್ರ ಸ್ಥಳಕ್ಕೆ ಪ್ರಸಿದ್ಧಿಯಾಗಿರುವ ಶ್ರವಣಬೆಳಗೊಳ ಕ್ಷೇತ್ರಕ್ಕೆ ದೇಶದ ವಿವಿಧ ರಾಜ್ಯಗಳಿಂದ ಕಾಲ್ನಡಿಗೆಯ ಮೂಲಕ ಬಂದಿರುವ ದಿಗಂಬರ ಜೈನ ತ್ಯಾಗಿಗಳು, ಇಲ್ಲಿ ವರ್ಷಾಯೋಗ ಚಾತುರ್ಮಾಸ್ಯ ವ್ರತಾಚರಣೆಯಲ್ಲಿ ಭಾಗಿಯಾಗಿದ್ದಾರೆ.

ಆಚಾರ್ಯರಾದ ಸುವಿಧಿಸಾಗರ ಮಹಾರಾಜರು, ವರ್ಧಮಾನಸಾಗರ ಮಹಾರಾಜರು ಮತ್ತು ಸಂಘಸ್ಥ ತ್ಯಾಗಿಗಳ ಸಾನಿಧ್ಯ ಹಾಗೂ ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿವೆ. ದಿಗಂಬರ ಜೈನ ಮುನಿಗಳು ತ್ಯಾಗ ಜೀವನದ ಸಾಧನೆಗಾಗಿ ನಿತ್ಯ ಕಠಿಣ ತಪಸ್ಸಿನಿಂದ ತಮ್ಮ ದೇಹವನ್ನು ಸಂಪೂರ್ಣವಾಗಿ ಕ್ಷಯಿಸಿ, ಮೋಕ್ಷ ಮಾರ್ಗದ ಹಾದಿಯಲ್ಲಿ ಸಾಗುತ್ತ ಆತ್ಮ ಕಲ್ಯಾಣ ಮಾಡಿಕೊಳ್ಳುತ್ತಾರೆ.

ಆಗಮ ಶಾಸ್ತ್ರಗಳಲ್ಲಿ ಉಲ್ಲೇಖಿಸಿದಂತೆ ದಿಗಂಬರ ಮುನಿ ಪರಂಪರೆಗೆ ಚ್ಯುತಿ ಬರದಂತೆ ನಡೆದುಕೊಳ್ಳುತ್ತಾರೆ. ಮುನಿಗಳು ನಿರ್ದಿಷ್ಟವಾಗಿ ಒಂದೆಡೆ ಇರುವಂತಿಲ್ಲ. ನಿರಂತರವಾಗಿ ವಿಹಾರ ಮಾಡಬೇಕಾಗುತ್ತದೆ. ವರ್ಷದಲ್ಲಿ ಒಂದು ಸಲ ಮಾತ್ರ ಒಂದೇ ಕಡೆ ನೆಲೆಸುವುದು ವಾಡಿಕೆ. ಅದೂ ಮಳೆಗಾಲದ ಚಾತುರ್ಮಾಸ್ಯದ ಸಂದರ್ಭದಲ್ಲಿ ಮಾತ್ರ. ತ್ಯಾಗ ಜೀವನದ ಸಾಧನೆಗಾಗಿ 4 ತಿಂಗಳು ವ್ರತಗಳಲ್ಲಿ ತೊಡಗಿಸಿಕೊಂಡು ಉಪವಾಸ, ಧರ್ಮ ಗ್ರಂಥಗಳ ನಿರಂತರ ಅಧ್ಯಯನ, ರಚನೆ ಮತ್ತು ಗ್ರಂಥ ಪ್ರಕಟಣೆ ಮಾಡುತ್ತಾರೆ. ದಿಗಂಬರ ದಿನಚರ್ಯದಲ್ಲಿ ತ್ಯಾಗಿಗಳು ಮಣೆ ಮತ್ತು ಹುಲ್ಲು ಚಾಪೆ ಹೊರತುಪಡಿಸಿ, ನಿದ್ರಿಸಲು ಬೇರಾವುದೇ ವಸ್ತುಗಳನ್ನೂ ಉಪಯೋಗಿಸುವುದಿಲ್ಲ.

ಎಷ್ಟೇ ಮಳೆಗಾಳಿ, ಚಳಿ, ಸೆಖೆ ಇದ್ದರೂ ತಾಳ್ಮೆಯಿಂದ ಸಹಿಸಿಕೊಂಡು ಇರುತ್ತಾರೆ. ದೇಹದ ಮೇಲೆ ವ್ಯಾಮೋಹ ಬರಬಾರದೆಂದು ಸಾಬೂನು ಬಳಸಿ ಸ್ನಾನ ಮಾಡುವುದು ನಿಷಿದ್ಧ. ದಂತಗಳಿಗೆ ಬ್ರಷ್ ಮಾಡುವಂತಿಲ್ಲ. ಮೀಸೆ, ಗಡ್ಡ, ತಲೆಕೂದಲು ತೆಗೆಯುವುದಕ್ಕೆ ಸಾಧನಗಳನ್ನು ಬಳಸುವ ಹಾಗಿಲ್ಲ. ಕೇಶಲೋಚನ ಕ್ರಿಯೆ ಅಂದರೆ ಕೈಯಿಂದ ಮೀಸೆ ಗಡ್ಡ, ತಲೆಕೂದಲು ಕಿತ್ತು ತೆಗೆಯುತ್ತಾರೆ. ಇದು ಮುನಿ ಪರಂಪರೆಯ ಪದ್ಧತಿ. ನಿತ್ಯ ಒಂದೇ ಆಹಾರ ಸೇವನೆ. ಅದು ತಟ್ಟೆ, ಬಟ್ಟಲು ಉಪಯೋಗಿಸದೇ ಕೈಯಿಂದ ಮಾತ್ರ ತೆಗೆದುಕೊಳ್ಳುತ್ತಾರೆ. ದಿಗಂಬರ ಮುನಿಗಳು ಮಣೆಯ ಮೇಲೆ ನಿಂತುಕೊಂಡು 2 ಕೈಗಳನ್ನು ಜೋಡಿಸಿ ಬೊಗಸೆಯಲ್ಲಿ ಆಹಾರ ತೆಗೆದುಕೊಳ್ಳುತ್ತಾರೆ. ಅವರು ಸೇವಿಸುವ ಆಹಾರದಲ್ಲಿ ಕಂದಮೂಲ ಅಂದರೆ ಗೆಡ್ಡೆ ಗೆಣಸು, ಈರುಳ್ಳಿ ಬೆಳ್ಳುಳ್ಳಿ, ಆಲೂಗಡ್ಡೆ, ಕ್ಯಾರೆಟ್, ಬೀಟ್‌ರೂಟ್ ಮೂಲಂಗಿಯಂತಹ ತರಕಾರಿಗಳ ತ್ಯಾಗವಿದ್ದು, ಆಹಾರ ತಯಾರಿಸಲು ತೆರೆದ ಬಾವಿಗಳಿಂದ ನೀರು ತಂದು, ಕುದಿಸಿ ಆರಿಸಿ ಬಳಸುತ್ತಾರೆ. ಅಡುಗೆಯಲ್ಲಿ ಉಪ್ಪಿನ ಬದಲಾಗಿ ಸೈಂದ್ರ ಲವಣ ಬಳಸುತ್ತಾರೆ. ಶ್ರಾವಕ, ಶ್ರಾವಕಿಯರಿಂದ ಸಿದ್ಧಪಡಿಸಿದ ಆಹಾರವಾದ ಚಪಾತಿ, ರೊಟ್ಟಿ, ಅನ್ನ, ಸಾರು, ಪಲ್ಯ, ಹಣ್ಣಿನ ರಸಗಳು, ಎಳನೀರು, ಬಿಸಿ ನೀರನ್ನು ತ್ಯಾಗಿಗಳು ಕೈಯಲ್ಲಿ ತೆಗೆದುಕೊಳ್ಳುತ್ತಾರೆ.

ಎಲ್ಲಿಗೆ ವಿಹಾರ ಮಾಡಿದರೂ ವಾಹನ ಬಳಸುವಂತಿಲ್ಲ. ಪಾದಯಾತ್ರೆಯ ಮೂಲಕವೇ ನಿಗದಿ ಪಡಿಸಿದ ಸ್ಥಳಕ್ಕೆ ಸಂಚರಿಸಬೇಕು. ವಯೋಸಹಜವಾಗಿ ದೇಹ ಸ್ಪಂದಿಸದೇ ಇದ್ದರೆ, ನಡೆಯಲು ಆಗದೇ ಇದ್ದಾಗ, ಕಣ್ಣು, ಕಿವಿ ಕೇಳದೇ ಇದ್ದಾಗ, ದೇಹ ಸಂಪೂರ್ಣ ಕ್ಷೀಣಿಸಿ, ನಿತ್ರಾಣವಾದಾಗ ಮುನಿ ಪರಂಪರೆಯ ನಿಯಮಗಳನ್ನು ಪಾಲಿಸಿ, ಆಹಾರ, ನೀರನ್ನು ನಿಧಾನವಾಗಿ ತ್ಯಜಿಸುತ್ತಾ ಅಂತಿಮವಾಗಿ ಮುನಿ ಸಂಪ್ರದಾಯದ ಸಲ್ಲೇಖನ ಸಮಾಧಿ ಮರಣ ಹೊಂದುತ್ತಾರೆ ಎಂದು ಪ್ರೊ. ಜೀವಂಧರ್ ಕುಮಾರ್ ಹೊತಪೇಟೆ ಹೇಳುತ್ತಾರೆ.

## ಅಹಿಂಸಾ ಧರ್ಮ ಪಾಲನೆ

ಅನಾದಿ ಕಾಲದಿಂದಲೂ ದಿಗಂಬರ ಜೈನಧರ್ಮದ ಪರಂಪರೆಯಲ್ಲಿ ಅಹಿಂಸಾ ಧರ್ಮ ಪಾಲನೆಗಾಗಿ ಮಹಾವ್ರತಧಾರಿ ಮುನಿರಾಜರು ತ್ಯಾಗಿಗಳು ವ್ರತಿಕರು ಚಾತುರ್ಮಾಸ್ಯ ವ್ರತ ಆಚರಿಸುವ ಪದ್ಧತಿ ಮೊದಲಿನಿಂದಲೂ ಇದೆ. ಮಳೆಗಾಲದಲ್ಲಿ ಮಾತ್ರ ಭೂದೇವಿಯು ಎಲ್ಲೆಡೆ ಸಸ್ಯ ಶ್ಯಾಮಲೆಗಳಿಂದ ಸದಾ ಹಚ್ಚ ಹಸುರಾಗಿ ಶೋಭಿಸುತ್ತಾಳೆ. ಕಣ್ಣಿಗೆ ಕಾಣಿಸುವ ಮತ್ತು ಕಾಣಿಸದೇ ಇರುವ ಅನಂತ ಜೀವಿಗಳು ಈ ಭೂಮಿಯ ಮೇಲೆ ಉತ್ಪತ್ತಿಯೂ ಆಗುವುದರಿಂದ ಎಲ್ಲಿಗೂ ವಿಹಾರ ಮಾಡದೇ ತಮ್ಮ ಆತ್ಮ ಕಲ್ಯಾಣದಲ್ಲಿ ಲೀನರಾಗುತ್ತಾ ಒಂದೇ ಸ್ಥಳದಲ್ಲಿ ನಿಂತು ಧರ್ಮ ತಪಸ್ಸಾಧನೆ ಮಾಡುವ ಮೂಲಕ ಶ್ರಾವಕ ಶ್ರಾವಕಿಯರಿಗೆ ಸತ್ಸಂಗದ ಧರ್ಮ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುತ್ತಾರೆ. ಈ 4 ತಿಂಗಳುಗಳ ಸಾಧನಾ ಸಮಯಕ್ಕೆ ವರ್ಷಾಯೋಗ ಇಲ್ಲವೇ ಚಾತುರ್ಮಾಸ್ಯ ಧಾರಣೆ ಎಂದು ಕರೆಯುವುದು ವಾಡಿಕೆ. ಈ ಚಾತುರ್ಮಾಸ್ಯವು ಆಷಾಡ ಶುದ್ಧ ಅಷ್ಟಮಿಯಿಂದ ಕಾರ್ತಿಕ ಶುದ್ಧ ಪೌರ್ಣಮಿಯವರೆಗೆ ಜರುಗುವುದು.

# ಏರೋಬಿಕ್ಸ್: ರಾಷ್ಟ್ರ ಮಟ್ಟಕ್ಕೆ ಆಯ್ಕೆ




ಹಾಸನ: ಬೆಂಗಳೂರಿನ ಗೋಪಾಲನ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಇತ್ತೀಚೆಗೆ ನಡೆದ ರಾಜ್ಯ ಮಟ್ಟದ ಸೀನಿಯರ್ ಏರೋಬಿಕ್ಸ್ ಜಿಮ್ನಾಸ್ಟಿಕ್‌ನಲ್ಲಿ ನಗರದ ಹೆಚ್.ಆರ್. ಹರ್ಷಿನಿ 3 ಚಿನ್ನದ ಪದಕ ಗೆದ್ದು, ಕೇರಳದ ಎರ್ನಾಕುಲಂನಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-30

**1146:** ಯುರೋಪಿನಲ್ಲಿ ಎರಡನೇ ಕ್ರೂಸೇಡ್ ಆರಂಭ.

**1682:** ವಿಲಿಯಂ ಪೆನ್ ಅವರು ಡೆಲಾವೇರ್ ನದಿಯ ತೀರದಲ್ಲಿ ಮೊದಲ ಬಾರಿ ಇಳಿದು ಬಂದರು.

**1721:** ಗ್ರೇಟ್ ನಾರ್ದನ್ ಯುದ್ಧದ ಅಂತ್ಯ ರಷ್ಯಾ ಮತ್ತು ಸ್ವೀಡನ್ ನಡುವೆ ನಿಸ್ಟಾಡ್ ಒಪ್ಪಂದಕ್ಕೆ ಸಹಿ.

**1835:** ಮೆಲ್ಬೋರ್ನ್ (ಆಸ್ಟ್ರೇಲಿಯಾ) ನಗರ ಸ್ಥಾಪನೆ.

**1909:** ಅಮೇರಿಕಾದ ಮೊದಲ ರೇಡಿಯೋ ಸುದ್ದಿ ಪ್ರಸಾರ.

**1918:** ಸೋವಿಯತ್ ನಾಯಕ ವ್ಲಾದಿಮಿರ್ ಲೆನಿನ್ ಹತ್ಯೆಗೆ ಯತ್ನ.

**1945:** ಹಾಂಗ್ ಕಾಂಗ್ ಮೇಲೆ ಜಪಾನ್‌ನ ಆಡಳಿತ ಅಂತ್ಯಗೊಂಡು ಬ್ರಿಟಿಷ್ ಆಡಳಿತ ಪುನಃ ಆರಂಭವಾಯಿತು.

**1963:** ಹಾಟ್‌ಲೈನ್ (ಮಾಸ್ಕೋ-ವಾಷಿಂಗ್ಟನ್ ನೇರ ದೂರವಾಣಿ ಸಂಪರ್ಕ) ಕಾರ್ಯಾರಂಭ, ಶೀತಸಮರದ ಸಂದರ್ಭದಲ್ಲಿ ತ್ವರಿತ ಸಂವಹನಕ್ಕಾಗಿ.

**1984:** ಅಮೃತಸರದ ಗೋಲ್ಡನ್ ಟೆಂಪಲ್ ಮೇಲೆ ನಡೆದ ಆಪರೇಷನ್ ಬ್ಲೂಸ್ಟಾರ್ ಸಂಬಂಧಿಸಿದಂತೆ ಭದ್ರತಾ ಗಲಭೆಗಳಲ್ಲಿ ಅನೇಕರ ಬಲಿ.

**2003:** ಭಾರತದಲ್ಲಿ ದೇಶದ ಮೊದಲ ಭೂಮಿ ಅವಲೋಕನ ಉಪಗ್ರಹ IRS-P6 (Resourcesat-1) ಯಶಸ್ವಿಯಾಗಿ ಉಡಾವಣೆ.

### ಜನನ

**1871:** ಎರ್ನೆಸ್ಟ್ ರಥರ್‌ಫೋರ್ಡ್ ಪ್ರಸಿದ್ಧ ಭೌತಶಾಸ್ತ್ರಜ್ಞ, ಅಣುಭೌತಶಾಸ್ತ್ರದ ಪಿತಾಮಹ ಎಂದು ಕರೆಯಲ್ಪಟ್ಟವರು

**1928:** ಎಚ್.ಎಸ್.ವಿ. ಯೋಗಿ ನರಸಿಂಹಯ್ಯ ಕನ್ನಡದ ಖ್ಯಾತ ಲೇಖಕ, ಕ್ರಾಂತಿಕಾರಿ ಚಿಂತಕ

**1945:** ರಾಕಿ (ರಾಜ್‌ನಾಥ್) ಸಿಂಗ್ ಭಾರತೀಯ ರಾಜಕಾರಣಿ

### ಮರಣ

**1483:** ಲೂಯಿ, ಫ್ರಾನ್ಸ್‌ನ ರಾಜ

**1985:** ಫ್ರಿಟ್ಜ್ ಬ್ರಿಂಗ್ಸ್, ಪ್ರಸಿದ್ಧ ಇಂಗ್ಲಿಷ್ ನಟ

# ಉಪ ಕಾರಾಗೃಹ ಉದ್ಘಾಟನೆಗೆ ಕೂಡಿಬಾರದ ಕಾಲ




> ಮೂಲಸೌಕರ್ಯಗಳಿಂದ ಕೂಡಿರುವ ಸುಸಜ್ಜಿತ ಉಪ ಕಾರಾಗೃಹ ಉದ್ಘಾಟನೆ ಸಿದ್ಧವಾಗಿದೆಯಾದರೂ ಸಿಬ್ಬಂದಿ ಹಾಗೂ ಅಧಿಕಾರಿಗಳ ನಿಯೋಜನೆ ಆಗಬೇಕಿದೆ. ಸಂಬಂಧಪಟ್ಟ ಸಚಿವರೊಂದಿಗೆ ಮಾತುಕತೆ ನಡೆಸಿದ್ದು ಉದ್ಘಾಟನೆಗೆ ಕ್ರಮ ವಹಿಸಲಾಗುವುದು.
>
> **– ಕೆ.ಎಂ. ಶಿವಲಿಂಗೇಗೌಡ, ಶಾಸಕ**

ಅರಸೀಕೆರೆ: ಅಂದಾಜು 9 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ತಾಲ್ಲೂಕು ಉಪ ಕಾರಾಗೃಹ ನಿರ್ಮಿಸಲಾಗಿದೆಯಾದರೂ ಲೋಕಾರ್ಪಣೆಯಾಗದೆ ಕೈದಿಗಳನ್ನು ಭೇಟಿ ಮಾಡಲು ಕುಟುಂಬಸ್ಥರು ದೂರದ ಹಾಸನಕ್ಕೆ ತೆರಳಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ.

ನಗರ ಹೊರವಲಯದ ಗೀಜಿಹಳ್ಳಿಯಲ್ಲಿ ಉಪ ಕಾರಾಗೃಹವನ್ನು ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಇಲ್ಲಿ ಯಾವುದೇ ಕೈದಿಗಳು ವಾಸಿಸದೆ ಪಾಳು ಬಂಗಲೆಯಂತಾಗಿದ್ದು ನಾಮಫಲಕದ ಬಣ್ಣವು ಮಾಸುವ ಹಂತಕ್ಕೆ ಬಂದಿದೆ. ಉಪ ಕಾರಾಗೃಹ ಉದ್ಘಾಟನೆಗೆ ತಾತ್ಸಾರ ಏಕೆ ಎಂಬ ಪ್ರಶ್ನೆಗೆ ಉತ್ತರವಿಲ್ಲದಾಗಿದೆ.

ನಾನಾ ಕಾರಣಗಳಿಂದ ವಿಚಾರಣೆಗೆ ಒಳಗಾಗುವ ಆರೋಪಿಗಳನ್ನು ಇರಿಸಲು ಸದ್ಯ ಪೊಲೀಸರು ಹಾಸನದ ಜಿಲ್ಲಾ ಕಾರಾಗೃಹ ಅವಲಂಬಿಸಿದ್ದಾರೆ. ಕೈದಿಗಳನ್ನು ಸಂಬಂಧಿಕರು ನೋಡಬೇಕಾದರೆ ಜಿಲ್ಲಾ ಕೇಂದ್ರಕ್ಕೆ ಪ್ರಯಾಣ ಬೆಳೆಸಬೇಕು. ಆರೋಪಿಗಳಷ್ಟೇ ಅಲ್ಲ ವಿವಿಧ ಕೆಲಸಕ್ಕಾಗಿ ಪೊಲೀಸರು ಸಹ ಹಾಸನಕ್ಕೆ ಹೋಗಬೇಕು. ಅದರಿಂದ ಹಣ ಮತ್ತು ಸಮಯ ವ್ಯಯವಾಗುತ್ತಿದೆ.

ರಾಜ್ಯ ಸರ್ಕಾರ ಸುಸಜ್ಜಿತ ಕಟ್ಟಡ ಮಾತ್ರವಲ್ಲದೆ ಅಗತ್ಯ ಮೂಲಸೌಕರ್ಯ ಕಲ್ಪಿಸಿದೆ. ಬಂದಿಖಾನೆ ನಿರ್ಮಿಸಲು ತೋರಿದ ಆಸಕ್ತಿಯನ್ನು ಅದರ ಕಾರ್ಯಾರಂಭಕ್ಕೆ ಆಸಕ್ತಿ ತೋರುತ್ತಿಲ್ಲ. ಇನ್ನಾದರೂ ಶಾಸಕ ಕೆ.ಎಂ. ಶಿವಲಿಂಗೇಗೌಡ ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಉಪ ಕಾರಾಗೃಹ ಆರಂಭಕ್ಕೆ ಮನಸ್ಸು ಮಾಡಬೇಕಿದೆ.

ರಾಜ್ಯ ಕನ್ನಡ ಪಡೆ ಅಧ್ಯಕ್ಷ ಬೋರೆಹಳ್ಳಿ ವೆಂಕಟೇಶ್ ಪ್ರತಿಕ್ರಿಯಿಸಿ, ಬಂಧನಕ್ಕೆ ಒಳಗಾಗುವವರೆಲ್ಲ ಆರೋಪಿಗಳಾಗಿರುವುದಿಲ್ಲ. ಕೆಲ ಸಂದರ್ಭದಲ್ಲಿ ಬಡವರು ಇಂಥ ಸನ್ನಿವೇಶ ಎದುರಿಸುವಂತಾಗುತ್ತದೆ. ಅಂತಹ ವೇಳೆ ಅವರ ಸಂಬಂಧಿಕರು ಹಾಸನದ ಕಾರಾಗೃಹಕ್ಕೆ ಹೋಗಲು ಹಣಕಾಸಿನ ತೊಂದರೆಯಾಗುತ್ತದೆ. ಅಧಿಕಾರಿಗಳು ಹಾಗೂ ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯಾರಂಭಕ್ಕೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

# ಹೊನ್ನೇನಹಳ್ಳಿ ಸರ್ಕಾರಿ ಶಾಲೆಗೆ ಕಲಿಕೋಪಕರಣ ಕೊಡುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಅರಕಲಗೂಡು: ತಾಲ್ಲೂಕಿನ ಹೊನ್ನೇನಹಳ್ಳಿ ಗ್ರಾಮದ ಸರ್ಕಾರಿ ಶಾಲೆ ಮತ್ತು ಅಂಗನವಾಡಿ ಕೇಂದ್ರಕ್ಕೆ ಸ್ಪರ್ಧಾತ್ಮಕ ಶಿಕ್ಷಣಕ್ಕೆ ಪೂರಕವಾದ ತಾಂತ್ರಿಕ ಪರಿಕರಗಳನ್ನು ಗ್ರಾಮದ ಹಿರಿಯ ದಾನಿಗಳು ನೀಡುವ ಮೂಲಕ ಸರ್ಕಾರಿ ಶಾಲೆ ಪ್ರಗತಿಗೆ ನೆರವಾಗಿದ್ದಾರೆ.

ಗ್ರಾಮದ ವಿಷಕಂಠಾಚಾರ್ ಅವರ ಮೊಮ್ಮಕ್ಕಳಾದ ಪದ್ಮಾವತಿ ಜಯಕುಮಾರ್ ಅವರು ಹಾಸನದಲ್ಲಿ ನೆಲೆಸಿದ್ದು, ಪ್ರಾಥಮಿಕ ಶಿಕ್ಷಣ ಕಲಿಸಿ ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಟ್ಟಿರುವ ಊರಿನ ಸರಕಾರಿ ಶಾಲೆಗೆ ಟಿಸ್ಮಾರ್ಟ್ ಟಿವಿಟಿಪ್ರೊಜೆಕ್ಟರ್ ಹಾಗೂ ಇತರೆ ಪರಿಕರಗಳನ್ನು ಕೊಡುಗೆಯಾಗಿ ನೀಡಿ ಶೈಕ್ಷಣಿಕ ಕ್ರಾಂತಿಗೆ ಉತ್ತೇಜಿಸಿದ್ದಾರೆ.

ಅಲ್ಲದೆ ಇತ್ತೀಚೆಗೆ ರಾಜ್ಯ ಸರ್ಕಾರದಿಂದಲೇ ಆಂಗ್ಲ ಮಾಧ್ಯಮದಲ್ಲಿ ಆರಂಭಗೊಂಡಿರುವ ಹೊನ್ನೇನ್ನಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಗ್ರಾಮದ ದಿವಂಗತ ಲಕ್ಷ್ಮಮ್ಮ ಮತ್ತು ಕಾಳಮ್ಮನ ಅಣ್ಣೇಗೌಡರ ಸ್ಮರಣಾರ್ಥವಾಗಿ ಕುಟುಂಬದ ಸದಸ್ಯರು ಎಲ್‌ಇಡಿ ಸ್ಲೇಟ್, ಇತರೆ ಅಗತ್ಯ ಪರಿಕರಗಳನ್ನು ಕೊಡುಗೆಯಾಗಿ ನೀಡಿ ಇತರೆ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಮಾದರಿಯಾಗಿದ್ದಾರೆ.

ಕ್ಷೇತ್ರದ ಶಾಸಕ ಎ.ಮಂಜು ಅವರ ಪತ್ನಿ ತಾರಾ ಮಂಜು ಅವರ ಸಹಭಾಗಿತ್ವದಲ್ಲಿ ಕಳೆದ ಎರಡು ವರ್ಷಗಳಿಂದಲೂ ಸರ್ಕಾರಿ ಶಾಲಾ ಆವರಣದಲ್ಲಿ ಸಕಲ ಸಿದ್ಧತೆಗಳೊಂದಿಗೆ ಆರಂಭಗೊಂಡು ಪೋಷಕರ ಮೆಚ್ಚುಗೆ, ವಿಶ್ವಾಸವನ್ನು ಹೊಂದಿರುವ ಎಲ್‌ಕೆಜಿ, ಯುಕೆಜಿ ಶಿಕ್ಷಣ ನೀಡುತ್ತಿರುವ ಮಕ್ಕಳ ಮನೆ ಶಾಲೆಗಳಿಗೂ ಸಹ ಹಿರಿಯ ವಿದ್ಯಾರ್ಥಿಗಳು, ಹಿರಿಯರು, ದಾನಿಗಳು ಸ್ಥಳೀಯವಾಗಿ ನೆರವು ನೀಡುತ್ತಿರುವುದು ತಾಲ್ಲೂಕಿನ ಸರ್ಕಾರಿ ಶಾಲೆಗಳ ಉಳಿವಿಗೆ ಉತ್ತೇಜಿತವಾಗಿದೆ. ಈ ಪ್ರಯತ್ನದ ಫಲವಾಗಿ ಪ್ರಸ್ತುತ ಮಕ್ಕಳ ಮನೆ ಶಾಲೆಯಲ್ಲಿ ಸುಮಾರು 250ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣವನ್ನು ಪೂರ್ವ ಪ್ರಾಥಮಿಕ ಹಂತದಲ್ಲಿ ಪಡೆಯುವಂತಾಗಿದೆ. ಈ ಹಂತದ ಶಿಕ್ಷಣವನ್ನು ಖಾಸಗಿ ಶಾಲೆಗಳಲ್ಲಿ ಪಡೆಯಬೇಕಾದರೇ ವಾರ್ಷಿಕ 50 ಸಾವಿರಕ್ಕೂ ಅಧಿಕ ಹಣವನ್ನು ತೆರಬೇಕಿದೆ. ಶಾಸಕ ಮಂಜು ಮತ್ತು ಅವರ ಧರ್ಮಪತ್ನಿ ತಾರಾ ಮಂಜು ಅವರು ಬಡಮಕ್ಕಳಿಗೆ ಅತೀ ಕಡಿಮೆ ಖರ್ಚಿನಲ್ಲಿ ಶಿಕ್ಷಣ ಕಲ್ಪಿಸುತ್ತಿರುವುದು ತುಂಬಾ ಸಂತಸ ತಂದಿದೆ ಎಂದು ಹೊನ್ನೇನಹಳ್ಳಿ ಅಂಗನವಾಡಿ ಕೇಂದ್ರದ ಮಕ್ಕಳ ಪೋಷಕರಾದ ಸಾವಿತ್ರಿ, ರತ್ನ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

# ಆ. 31ಕ್ಕೆ ಬೇಲೂರಿನಲ್ಲಿ ಉಚಿತ ಫರ್ಟಿಲಿಟಿ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಬೇಲೂರು: ತಾಲ್ಲೂಕಿನಲ್ಲಿ ಮೊದಲ ಬಾರಿಗೆ ಉಚಿತ ಫರ್ಟಿಲಿಟಿ ಶಿಬಿರವನ್ನು ಆ. 31 ರಂದು ಪಟ್ಟಣದ ಕಾವೇರಿ ಕ್ಲಿನಿಕ್‌ನಲ್ಲಿ ಆಯೋಜಿಸಲಾಗಿದೆ ಎಂದು ಡಾ. ಚಂದ್ರಮೌಳಿ ತಿಳಿಸಿದ್ದಾರೆ. ಬೆಂಗಳೂರಿನ ಮಿಲನ ಫರ್ಟಿಲಿಟಿ ಆಸ್ಪತ್ರೆ, ಕಾವೇರಿ ಕ್ಲಿನಿಕ್ ಹಾಗೂ ಲಯನ್ಸ್ ಕ್ಲಬ್ ವತಿಯಿಂದ ಶಿಬಿರ ಹಮ್ಮಿಕೊಳ್ಳಲಾಗಿದೆ. ಕಾವೇರಿ ಕ್ಲಿನಿಕ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮಿಲನ ಫರ್ಟಿಲಿಟಿ ಸ್ಪೆಷಲಿಸ್ಟ್ ಮತ್ತು ಸ್ತ್ರೀ ರೋಗ ತಜ್ಞೆ ಡಾ. ಕೀರ್ತನಾ ರವಿ ನೇತೃತ್ವದಲ್ಲಿ ಮಕ್ಕಳಿಲ್ಲದ ದಂಪತಿಗಾಗಿ ಹಾಗೂ ಮಹಿಳೆಯರ ಗುಪ್ತ ಸಮಾಲೋಚನೆಗಾಗಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಆರೋಗ್ಯವು ಪ್ರತಿಯೊಬ್ಬರ ಜೀವನದಲ್ಲಿ ಅತ್ಯಂತ ಮುಖ್ಯವಾದದ್ದು. ಇಂದಿನ ತಂತ್ರಜ್ಞಾನದಿಂದ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಲಭ್ಯವಿರುವುದರಿಂದ ಜನರು ವೈದ್ಯಕೀಯ ನೆರವು ಪಡೆಯಲು ಮುಕ್ತ ಮನಸ್ಸಿನಿಂದ ಮುಂದಾಗಬೇಕು. ಐಡಿಎಸ್‌ಸಿ ಶಿಬಿರವು ಸತತ ನಾಲ್ಕನೇ ವರ್ಷದ ಶಿಬಿರ ಆಯೋಜಿಸಿಕೊಂಡು ಬರಲಾಗಿದ್ದು ಅದರಲ್ಲಿ ಉಚಿತ ಸ್ಕ್ಯಾನಿಂಗ್, ಉಚಿತ ವೀರ್ಯಾಣು ತಪಾಸಣೆ ಸೇರಿದಂತೆ ಆರೋಗ್ಯ ಶಿಬಿರ ನಡೆಯಲಿದೆ ಎಂದು ಹೇಳಿದರು.

# ನಗದು-ಚಿನ್ನಾಭರಣ ಕಳವು

ಹಾಸನ: ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 98 ಸಾವಿರ ರೂ. ಬೆಲೆ ಬಾಳುವ ಚಿನ್ನಾಭರಣ ಹಾಗೂ 85 ಸಾವಿರ ರೂಪಾಯಿ ಕದ್ದಿರುವ ಘಟನೆ ಚನ್ನಪಟ್ಟಣ ಬಡಾವಣೆಯಲ್ಲಿ ನಡೆದಿದೆ. ನಿವಾಸಿ ಮಂಜುನಾಥ್ ಅವರು ಗೌರಿ ಹಬ್ಬದ ಹಿನ್ನೆಲೆಯಲ್ಲಿ ಆ. 26 ರಂದು ಮನೆಗೆ ಬೀಗ ಹಾಕಿ ಕುಟುಂಬ ಸಮೇತ ಹುಟ್ಟೂರಾದ ಆಲೂರು ತಾಲ್ಲೂಕಿನ ಮೂಡಲುಕೊಪ್ಪಲು ಗ್ರಾಮಕ್ಕೆ ತೆರಳಿದ್ದರು. ಮಾರನೇ ದಿನ ಬಂದು ನೋಡಿದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248